Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 102/2017

ಪ್ರಾ.ಸಾ. 5 ಚಾ.ಸಾ. 8

| | | |
|---|---|---|
| ಹೆಸರು | : | ಮಲ್ಲಪ್ಪ |
| ತಂದೆಯ ಹೆಸರು | : | ರಾಜಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಬಳಿಚಕ್ರ ಗ್ರಾಮ ತಾಃ ಯಾದಗಿರಿ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 15-07-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ಚಾಸಾ-1 ಮರೆಮ್ಮ ನನ್ನ ಪತ್ನಿ. ಚಾಸಾ-4 ನನ್ನ ತಾಯಿ. ನಾವು ಮಾದಿಗ ಜನಾಂಗಕ್ಕೆ ಸೇರಿದವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ ಅವರು ಕಬ್ಬಲಿಗ ಜಾತಿಗೆ ಸೇರಿದವರು. ಸರ್ವೆ ನಂ. 171 ಬಳಿಚಕ್ರ ಗ್ರಾಮ ಸೀಮಾಂತರದ ಹೊಲದಲ್ಲಿ ನನ್ನ ಪತ್ನಿ ಮತ್ತು ನನ್ನ ತಾಯಿ ಶೇಂಗಾ ಬೆಳೆಯನ್ನು ಕಾಯಲು ಹೋದಾಗ ಈಗ್ಗೆ ಸುಮಾರು 7-8 ವರ್ಷಗಳ ಹಿಂದೆ ಮಧ್ಯಾಹ್ನ 12-00 ಗಂಟೆ ಸುಮಾರಿಗೆ ಒಡ್ಡಿನ ಮೇಲೆ ಕುಳಿತ್ತಿದ್ದಾಗ 3 ಜನ ಆರೋಪಿತರು ಅಲ್ಲಿಗೆ ಬಂದು ಮಾದಿಗ ಸೂಳೇ ಮಕ್ಕಳೆ ಸೊಕ್ಕು ಜಾಸ್ತಿಯಾಗಿದೆ ಇಲ್ಲಿ ಯಾಕೆ ಕುಳಿತ್ತಿದ್ದಿರಿ ಈ ಜಮೀನು ನಮ್ಮದು ನಾವು ತೆಗೆದುಕೊಂಡಿದ್ದೇವೆ ಎಂದು ಅಂದು 1 ನೇ ಆರೋಪಿ ನರಸಿಂಗಪ್ಪ ನನ್ನ ತಾಯಿಗೆ ಕಲ್ಲಿನಿಂದ ಎಡಗಡೆ ಬೆನ್ನಿಗೆ ಹೊಡೆದಿರುತ್ತಾನೆ. 2 ನೇ ಆರೋಪಿ ಈಶಪ್ಪ ನನ್ನ ಹೆಂಡತಿಗೆ ಕೈ ತಿರುವಿ ಬೆನ್ನಿಗೆ ಹೊಡೆದಿರುತ್ತಾರೆ. 3 ನೇ ಆರೋಪಿ ಹೊಡೆಯಿರಿ ಈ ಮಾದಿಗ ಸೂಳೆಯರದು ಜಾಸ್ತಿಯಾಗಿದೆ ಎಂದು ಪ್ರಚೋದನೆ ನೀಡಿರುತ್ತಾನೆ. ಜಗಳವನ್ನು ಚಾಸಾ-5 ಮತ್ತು 6 ಬಸಮ್ಮ ಹಾಗೂ ಸಾಬಮ್ಮ ಬಿಡಿಸಿರುತ್ತಾರೆ. ನಂತರ ಆರೋಪಿತರು ಮಾದಿಗ ಸೂಳೇರೆ ಈ ಸಲ ಉಳಿದಿರಿ ಇನ್ನೊಂದು ಸಲ ಈ ಕಡೆ ಬಂದರೆ ಉಳಿಯುವುದಿಲ್ಲ ಕಲಾಸ ಮಾಡುತ್ತೇವೆ ಎಂದು ಹೇಳಿ ಬೆದರಿಕೆ ಹಾಕಿರುತ್ತಾರೆ. ನಂತರ ಪಕ್ಕದ ಹೊಲದ ಚಾಸಾ-7 ಭೀಮರಾಯ ಅಂಬುಲೇನ್ಸ ಕರೆಯಿಸಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾವು ಮಾದಿಗ ಜಾತಿಗೆ ಸೇರಿದವರು ಎಂದು ಒಂದೇ ಊರಿನವರಾದ ಕಾರಣ ಆರೋಪಿತರಿಗೆ ತಿಳಿದಿತ್ತು. ಈ ಘಟನೆಯ ಬಗ್ಗೆ ನನಗೆ ನನ್ನ ಪತ್ನಿ ಮತ್ತು

ಭೀಮರಾಯ ತಿಳಿಸಿರುತ್ತಾರೆ. ಆಗ ನಾನು ಸೈದಾಪೂರ ಸರಕಾರಿ ಆಸ್ಪತ್ರೆಗೆ ಹೋಗಿ ನನ್ನ ತಾಯಿಗೆ ವಿಚಾರಿಸಿದ್ದು ಘಟನೆಯ ಬಗ್ಗೆ ತಿಳಿಸಿರುತ್ತಾರೆ. ನನ್ನ ಪತ್ನಿ ಮತ್ತು ತಾಯಿಗೆ ಹೊಡೆದ ಆರೋಪಿತರು ನ್ಯಾಯಾಲಯದ ಮುಂದೆ ಇರುತ್ತಾರೆ ಎಂದು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

2. ಈ ಪ್ರಕರಣದ ಘಟನೆಯನ್ನು ನೋಡಿಲ್ಲ ಎಂದರೆ ಸರಿ. ಸದರಿ ಜಮೀನನ್ನು ಸುಮಾರು 15-20 ವರ್ಷಗಳ ಹಿಂದೆ ಭೀಮಣ್ಣ ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಸೈದಾಪೂರ ಪೊಲೀಸಠಾಣೆಯಲ್ಲಿ ನನ್ನ ವಿರುದ್ಧ ಶಾಂತಿ ಭಂಗ ಪ್ರಕರಣಗಳು ಮತ್ತು ಕಳ್ಳತನದ ಪ್ರಕರಣಗಳು ದಾಖಲಾಗಿರುತ್ತವೆ ಎಂದರೆ ಸುಳ್ಳಾಗಿ ದಾಖಲಾಗಿರುತ್ತವೆ ಎಂದು ಸಾಕ್ಷಿ ನುಡಿಯುತ್ತಾರೆ. ಭೀಮರಾಯ ನನ್ನ ವಿರುದ್ದ ಸಿವಿಲ್ ಪ್ರಕರಣ ದಾಖಲಿಸಿದ್ದು ಸದರಿ ದಾವೆಯಲ್ಲಿ ನನ್ನ ವಿರುದ್ದ ಡಿಕ್ರಿಯಾಗಿದೆ ಎಂದರೆ ಪ್ರಸ್ತೂತವು ಪ್ರಕರಣ ವಿಚಾರಣೆಯಲ್ಲಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ನಂತರವೂ ಮತ್ತೊಂದು ದಾವೆ ನಡೆದಿದೆ ಎಂದರೆ ಸರಿಯಲ್ಲ. ನಾವು ಹಾಕಿದ್ದ ದಾವೆ ನ್ಯಾಯಾಲಯದಲ್ಲಿ ವಜಾ ಆಗಿದೆ ಎಂದರೆ ಸರಿ. ನಾವು ಸದರಿ ಹೊಲದ ಸಲುವಾಗಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ ಮತ್ತು ನಾನು ಯಾವುದೇ ಘಟನೆಯನ್ನು ನೋಡದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸರ್ವೆ ನಂ. 171 ಬಳಿಚಕ್ರ ಗ್ರಾಮ ಸೀಮಾಂತರದ ಹೊಲದಲ್ಲಿ ನನ್ನ ಪತ್ನಿ ಮತ್ತು ನನ್ನ ತಾಯಿ ಶೇಂಗಾ ಬೆಳೆಯನ್ನು ಕಾಯಲು ಹೋದಾಗ ಈಗ್ಗೆ ಸುಮಾರು 7-8 ವರ್ಷಗಳ ಹಿಂದೆ ಮಧ್ಯಾಹ್ನ 12-00 ಗಂಟೆ ಸುಮಾರಿಗೆ ಒಡ್ಡಿನ ಮೇಲೆ ಕುಳಿತ್ತಿದ್ದಾಗ 3 ಜನ ಆರೋಪಿತರು ಅಲ್ಲಿಗೆ ಬಂದು ಮಾದಿಗ ಸೂಳೇ ಮಕ್ಕಳೆ ಸೊಕ್ಕು ಜಾಸ್ತಿಯಾಗಿದೆ ಇಲ್ಲಿ ಯಾಕೆ ಕುಳಿತ್ತಿದ್ದಿರಿ ಈ ಜಮೀನು ನಮ್ಮದು ನಾವು ತೆಗೆದುಕೊಂಡಿದ್ದೇವೆ ಎಂದು ಅಂದು 1 ನೇ ಆರೋಪಿ ನರಸಿಂಗಪ್ಪ ನನ್ನ ತಾಯಿಗೆ ಕಲ್ಲಿನಿಂದ ಎಡಗಡೆ ಬೆನ್ನಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಈಶಪ್ಪ ನನ್ನ ಹೆಂಡತಿಗೆ ಕೈ ತಿರುವಿ ಬೆನ್ನಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಹೊಡೆಯಿರಿ ಈ ಮಾದಿಗ ಸೂಳೆಯರದು ಜಾಸ್ತಿಯಾಗಿದೆ ಎಂದು ಪ್ರಚೋದನೆ ನೀಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳವನ್ನು ಚಾಸಾ-5 ಮತ್ತು 6 ಬಸಮ್ಮ ಹಾಗೂ ಸಾಬಮ್ಮ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಮಾದಿಗ ಸೂಳೇರೆ ಈ ಸಲ ಉಳಿದಿರಿ ಇನ್ನೊಂದು ಸಲ ಈ ಕಡೆ ಬಂದರೆ ಉಳಿಯುವುದಿಲ್ಲ ಕಲಾಸ ಮಾಡುತ್ತೇವೆ ಎಂದು ಹೇಳಿ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪಕ್ಕದ ಹೊಲದ ಚಾಸಾ-7 ಭೀಮರಾಯ ಅಂಬುಲೇನ್ಸ ಕರೆಯಿಸಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮಾದಿಗ ಜಾತಿಗೆ ಸೇರಿದವರು ಎಂದು ಒಂದೇ ಊರಿನವರಾದ ಕಾರಣ ಆರೋಪಿತರಿಗೆ ತಿಳಿದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆಯ ಬಗ್ಗೆ ನನಗೆ ನನ್ನ ಪತ್ನಿ ಮತ್ತು ಭೀಮರಾಯ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು ಸೈದಾಪೂರ ಸರಕಾರಿ ಆಸ್ಪತ್ರೆಗೆ ಹೋಗಿ ನನ್ನ ತಾಯಿಗೆ ವಿಚಾರಿಸಿದ್ದು ಘಟನೆಯ ಬಗ್ಗೆ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.